ಕೊಂಡು ಹೋಗಿ, ತೊಳೆದುಕೊಂಡು ಬಾ'' ಎಂದನು. ಏಕನಾಥನು ಆ ಪಾತ್ರೆಯನ್ನು ತೆಗೆದುಕೊಂಡು ಹೋಗಿ ಅದರಲ್ಲಿದ್ದ ನೀರನ್ನು ಭಕ್ತಿಯಿಂದ ಕುಡಿದುಬಿಟ್ಟನು! ಅವನ ನಿಷ್ಠೆಯನ್ನು ದೂರದಿಂದಲೇ ಗಮನಿಸಿದ ಜನಾರ್ದನ ಪಂತರು ದತ್ತಾತ್ರೇಯನಿಗೆ ಏಕನಾಥನಿಗೆ ದರ್ಶನ ನೀಡಿ ಕೃಪೆ ಮಾಡಬೇಕೆಂದು ಬೇಡಿಕೊಂಡರು. ಏಕನಾಥನು ಅದುವರೆಗೂ ದತ್ತಾತ್ರೇಯನು ಮುಸಲ್ಮಾನನ ವೇಷದಲ್ಲಿದ್ದುದರಿಂದ ಅವನಿಗೆ ನಮಸ್ಕರಿಸಿರಲಿಲ್ಲ. ''ಏಕನಾಥನು ಸಾಮಾನ್ಯ ಬಾಲಕನಲ್ಲ. ಜಗತ್ತನ್ನು ಕಾಪಾಡಲು ಬಂದಿರುವ ವಿಠ್ಠಲನ ಅವತಾರವೇ ಅವನು. ಈತ ಮುಂದೆ ಅನೇಕ ಅಭಂಗಗಳನ್ನು ರಚಿಸಿ ಜನರಲ್ಲಿ ಭಕ್ತಿಯನ್ನು ಜಾಗೃತಗೊಳಿಸುವನು. ಭಾಗವತಕ್ಕೆ ವ್ಯಾಖ್ಯಾನ ಬರೆದು ಅದನ್ನು ಇನ್ನಷ್ಟು ಸ್ಪಷ್ಟಪಡಿಸುವನು. ರಾಮಾಯಣವನ್ನು ಪ್ರಾಕೃತದಲ್ಲಿ ರಚಿಸುವನು'' ಎಂದು ಭವಿಷ್ಯ ನುಡಿದನು ದತ್ತಾತ್ರೇಯ. ಅವನು ಹೀಗೆ ಮಾತನಾಡುತ್ತಿದ್ದಂತೆ ಅವನ ಮುಸಲ್ಮಾನ ರೂಪವು ಮಾಯವಾಗಿ ಆರು ಕೈಗಳ, ನೀಳಗಣ್ಣುಗಳ, ಸುಂದರ ರೂಪವು ಪ್ರಕಟಗೊಂಡಿತು! ನಾಯಿಯ ಜಾಗದಲ್ಲಿ ಈಗ ಕಾಮಧೇನುವು ಕಾಣಿಸಿಕೊಂಡಿತು! ಏಕನಾಥನು ದತ್ತಾತ್ರೇಯನಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿದನು. ದತ್ತಾತ್ರೇಯನು ತನ್ನ ಆರೂ ಕೈಗಳಿಂದ ಏಕನಾಥನನ್ನು ಅಪ್ಪಿಕೊಂಡು ಅವನ ಮುಖವನ್ನು ನೇವರಿಸಿದನು. ಹೀಗೆ ಗುರು ಜನಾರ್ದನ ಪಂತರಿಂದ ಏಕನಾಥರಿಗೆ ದತ್ತಾತ್ರೇಯನ ದರ್ಶನವುಂಟಾಗಿ ಕೃತಾರ್ಥರಾದರು.

ತನ್ನ ಸ್ವಪ್ರಯತ್ನದಿಂದ ಎಷ್ಟು ಸಾಧನೆಗಳನ್ನು ಮಾಡಿದರೂ ಆಧ್ಯಾತ್ಮಿಕ ಜಾಗೃತಿಯಾಗದ ಶಿಷ್ಯನಿಗೆ ಗುರುವು ತನ್ನ ಆಧ್ಯಾತ್ಮಿಕ ಶಕ್ತಿಯನ್ನು ನೋಟದಿಂದಲೊ, ಸಂಕಲ್ಪದಿಂದಲೋ, ಸ್ಪರ್ಶದಿಂದಲೋ ಹರಿಸುತ್ತಾನೆ. ಅದನ್ನು ತಾಂತ್ರಿಕ ಪರಿಭಾಷೆಯಲ್ಲಿ 'ಶಕ್ತಿಪಾತ'ವೆನ್ನುವರು. ಇದೇ ಕೃಪೆ. ಈ ಶಕ್ತಿಪಾತ ರೂಪದ ಕೃಪೆಯು ಪಾತ್ರಾಪಾತ್ರಗಳನ್ನು ಕೂಡ ಲೆಕ್ಕಿಸದು. ***ಮತಂಗಾಗಮ***ಕ್ಕೆ ಬರೆದ ತಮ್ಮ ಟೀಕೆಯಲ್ಲಿ ಅನಿರುದ್ಧನು '**ಸ್ಥಾವರಾಂತಮಪಿ ದೇವಸ್ಯ ಸ್ವರೂಪೋನ್ಮೂಲನಾತ್ಮಿಕಾ। ಶಕ್ತಿಃ ಪತತಿ ಸಾಪೇಕ್ಷಾ ನ ಕ್ವಾಪಿ...॥**' ಎಂದು 'ಶಕ್ತಿಪಾತ'ವು ನಿರಪೇಕ್ಷ ಕೃಪೆಯೆಂಬುದನ್ನು ಸೂಚಿಸಿದ್ದಾನೆ. ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು, ಶ್ರೀಮಾತೆ ಶಾರದಾದೇವಿಯವರು, ರಮಣ ಮಹರ್ಷಿಗಳು ಮೊದಲಾದ ಗುರುಗಳ ಜೀವನದಲ್ಲಿ ಈ ಬಗೆಯ ಕೃಪೆಯನ್ನು ಕಾಣಬಹುದು. ಶಾರದಾದೇವಿಯವರು ಯಾರೇ ಆಗಲಿ ತಮ್ಮಿಂದ ಮಂತ್ರ ದೀಕ್ಷೆಯನ್ನು ತೆಗೆದು ಕೊಂಡಿರಲಿ, 'ಅವರು ನರಕಕ್ಕೆ ಹೋಗುವಂತಾದರೂ ತಾವು ಅವರನ್ನು ಎಳೆದುಕೊಂಡು ಬರುವು'ದಾಗಿ ಆಶ್ವಾಸನೆ ನೀಡಿದ್ದು ಅವರ ಜೀವನಚರಿತ್ರೆಯಲ್ಲಿ ಕಂಡುಬರುತ್ತದೆ. ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಅನುಭವಗಳನ್ನು ಬಯಸುವವರಿಗೆ ಕಾಳೀಮಾತೆಗೆ ಪ್ರಾರ್ಥನೆ ಮಾಡುವಂತೆ ಹೇಳಿ ಅದ್ಭುತ ದರ್ಶನಗಳನ್ನು ಮಾಡಿಸುತ್ತಿದ್ದುದು ದಾಖಲಾಗಿದೆಯಷ್ಟೆ.

ಗುರುಕೃಪೆಯು ಶಿಷ್ಯನ ಪಾಪರಾಶಿಗಳನ್ನು ತನ್ನದಾಗಿಸಿಕೊಂಡು ಶಿಷ್ಯನು ಅಧೋಗತಿಗೆ ಹೋಗದಂತೆ ತಡೆಯುವ ಶಕ್ತಿಯೂ ಹೌದು. ಒಮ್ಮೆ ಬೇಲೂರು ಮಠಕ್ಕೆ ದೀಕ್ಷೆ ತೆಗೆದುಕೊಳ್ಳಲು ಒಬ್ಬ ಬಂದಿದ್ದ. ಆಧ್ಯಾತ್ಮಿಕ ಶಕ್ತಿಕೋಶಗಳಂತಿದ್ದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಿವಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ಮೂರೂ ಮಂದಿ ಅವನ ಆಂತರ್ಯದಲ್ಲಿದ್ದ ಪಾಪವನ್ನು ನೋಡಿ ಹೆದರಿ ದೀಕ್ಷೆಯನ್ನು ನಿರಾಕರಿಸಿದರು. ಜಯರಾಂಬಾಟಿಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಕಳುಹಿಸಿದರು. ಶ್ರೀಮಾತೆಯವರು ಆ ಭಕ್ತನಿಗೆ ದೀಕ್ಷೆಯನ್ನು ನೀಡಿ ಅಸಹನೀಯ ವೇದನೆಯನ್ನು ಅನುಭವಿಸಿದರು. 'ಪ್ರೀತಿಯ ಮಕ್ಕಳು ಹೊರದೇಶಗಳಿಗೆ ಹೋಗಿ ಎಷ್ಟೋ ಒಳ್ಳೊಳ್ಳೆಯ ವಸ್ತುಗಳನ್ನು ಕಳುಹಿಸಿಕೊಡುತ್ತಾರೆ. ನೋಡು ಕೊನೆಗೂ ರಾಖಾಲ (ಸ್ವಾಮಿ ಬ್ರಹ್ಮಾನಂದರು) ಕಳಿಸಿದ್ದು ಇದನ್ನು!' ಎಂದು ಉದ್ಗರಿಸಿದರು! ಒಮ್ಮೆ ಕೋಯಲ್‌ಪಾರಾದ ಭಕ್ತ ಶ್ರೀಮಾತೆಯವರ ಕಷ್ಟವನ್ನು ಮನಗಂಡು, ''ಅಮ್ಮ, ನಮ್ಮನ್ನೆಲ್ಲ ಮುಟ್ಟುವುದರಿಂದ ನಿಮಗೆ ಇನ್ನಷ್ಟು ಯಾತನೆಯಾಗುವುದಾದರೆ ಅದನ್ನು ನೀವು ತಪ್ಪಿಸುವುದೇ ಒಳಿತು'' ಎಂದಾಗ ಅವರು ಕಳಕಳಿಯಿಂದ, ''ಇಲ್ಲಪ್ಪ, ಹಾಗೆನ್ನಬೇಡ. ನಾವು ಬಂದಿರುವುದೇ ಅದಕ್ಕಾಗಿ. ಜನರ ಪಾಪ-ಸಂಕಟಗಳನ್ನು ಸ್ವೀಕರಿಸದೆ ಹೋದರೆ, ಸ್ವೀಕರಿಸಿ ಅದನ್ನು ಜೀರ್ಣಿಸಿಕೊಳ್ಳದೆ ಹೋದರೆ, ಇನ್ನು ಯಾರು ಮಾಡುತ್ತಾರೆ ಹೇಳು?'' ಎಂದು ಉತ್ತರಿಸುತ್ತಾರೆ ಶ್ರೀಮಾತೆಯವರು. ಸ್ವಾಮಿ ಬ್ರಹ್ಮಾನಂದರ ಒಬ್ಬ ಶಿಷ್ಯರು ಗುರುವಿನ ಶಕ್ತಿಯನ್ನು ಖುದ್ದಾಗಿ ಅನುಭವಿಸುವ ಘಟನೆ ಒದಗಿ ಬಂತು. ಅವರೊಮ್ಮೆ ಎಷ್ಟು ಬಾರಿ ಕೆಟ್ಟದ್ದನ್ನು ಆಲೋಚನೆ ಮಾಡಬೇಕೆಂದು ಬಯಸಿದರೂ, ಗುರುವಿನ ಕೃಪಾಶಕ್ತಿಯಿಂದ ಕೆಟ್ಟದ್ದನ್ನು ಆಲೋಚಿಸಲೇ ಆಗುತ್ತಿರಲಿಲ್ಲವಂತೆ! ಶಿಷ್ಯನು ಯಾವುದೇ ರೀತಿಯಲ್ಲಿ ಆಧ್ಯಾತ್ಮಿಕವಾಗಿ ಪತನ ಹೊಂದದಂತೆ ಗುರುವಿನ ಶಕ್ತಿಯು ಸದಾ ಅವನನ್ನು ಕಾಯುತ್ತಿರುತ್ತದೆ.

ಸಾಧಕನು ತನ್ನ ಸಾಧನೆಯ ಸಮಯದಲ್ಲಿ ತನಗೆ ಸಂಪೂರ್ಣವಾಗಿ ಗುರುಕೃಪೆಯು ಪ್ರಾಪ್ತವಾಗಿದೆಯೆಂದೇ ಶ್ರದ್ಧೆಯಿಂದ ಮುಂದುವರಿಯಬೇಕು. ಶ್ರದ್ಧೆಯೇ ಕೃಪೆಯ ಸಂಪೂರ್ಣ ಫಲವನ್ನು ಅನುಭವಿಸುವಲ್ಲಿ ಸಹಕಾರಿ. ಗುರುವು ತನಗಾಗಿ ಎಂದೂ ಯಾವ ಕರ್ಮವನ್ನೂ ಮಾಡನು. ಎಲ್ಲ ಬಗೆಯಿಂದಲೂ ಅವನ ಮನಸ್ಸು , ಮಾತು ಕೃತಿಗಳೆಲ್ಲವೂ ತನ್ನ ಶಿಷ್ಯರ ಮಂಗಳಕ್ಕಾಗಿಯೆ ಹಗಲೂ ಇರುಳೂ ನಿರತವಾಗಿರುತ್ತವೆ. ಅಂತಹ ಗುರುವಿನ ಪಾದಗಳಲ್ಲಿ ಮನಸ್ಸು ಸಂಪೂರ್ಣವಾಗಿ ಶರಣಾಗಬೇಕು. **ಗುರೋರಂಘ್ರಿ ಪದ್ಮೇ ಮನಶ್ಚೇನ್ನ ಲಗ್ನಂ । ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥** – 'ಗುರುವಿನ ಪಾದಕಮಲಗಳಲ್ಲಿ ಮನಸ್ಸು ಮುಳುಗದಿದ್ದರೆ, ನಮ್ಮ ಯಾವ ಪುಣ್ಯ ಸಮೂಹದ ಬಲದಿಂದ ಏನು ಫಲ?' ಎಂದು ಶಂಕರರು ತಮ್ಮ ಗುರ್ವಷ್ಟಕದಲ್ಲಿ ಸುಂದರವಾಗಿ ಗುರುವಿನ ಶರಣಾಗತಿಯೇ ಜ್ಞಾನ, ಸಂಸಾರನಿವೃತ್ತಿಗೆ ದ್ವಾರವೆನ್ನುತ್ತಾರೆ. ಅಂತಹ ಸದ್ಗುರುವಿನ ಕೃಪೆಯು ನಮ್ಮನ್ನು ಸಂಸಾರದಿಂದ ಮೇಲೆತ್ತಲಿ.

# ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

## ಭಾಗ-೯

**ಬಾ**ಬಾ ಹೇಳತೊಡಗಿದರು: ''೧೪ ವರ್ಷಗಳ ಕಾಲ ನನಗೆ ಹಣದ ಸ್ಪರ್ಶವೇ ಇರಲಿಲ್ಲ. ಗಿರಿ, ವನಗಳಲ್ಲಿ ಸಂಚರಿಸುತ್ತಿದ್ದಾಗ ಒಂದೇ ಒಂದು ರೂಪಾಯಿ ನನ್ನ ಹತ್ತಿರವಿದ್ದರೂ ನನಗೆ ಹಿಂದಿರುಗಲಾಗುತ್ತಿರಲಿಲ್ಲ. ನನ್ನ ಹತ್ತಿರ ಏನೂ ಇಲ್ಲದಿದ್ದರೂ, ದೊಣ್ಣೆಯಿಂದ ಏಟಿನ ಮೇಲೆ ಏಟು ಕೊಟ್ಟು ನನ್ನನ್ನು ಅರೆಜೀವ ಮಾಡಿಬಿಟ್ಟಿದ್ದರು. ಹಣವೇನಾದರೂ ನನ್ನಲ್ಲಿದ್ದಿದ್ದರೆ ಅದೇನು ಮಾಡುತ್ತಿದ್ದರೋ ಊಹಿಸಿ ನೋಡು. (ಕಥ್‌ನಲ್ಲಿ) ಸ್ವಾಮೀಜಿಯನ್ನು ಹುಡುಕುತ್ತಿದ್ದಾಗ ನಾರಾಯಣ ಸರೋವರದ ದಾರಿಯಲ್ಲಿ ಡಕಾಯಿತರ ಕೈಗೆ ಸಿಕ್ಕಿ ಬಿದ್ದೆ. ಕೊನೆಗೆ ಸ್ವಾಮೀಜಿಯವರನ್ನು ಭೇಟಿಯಾದಾಗ ಅವರು ಎಲ್ಲ ವಿಷಯಗಳನ್ನೂ ಕೇಳಿ ತಿಳಿದರು. ನನ್ನ ಹತ್ತಿರ ಹಣವಿರಲಿಲ್ಲವೆಂದು ತಿಳಿದು ಅವರು, ''ಆದ್ದರಿಂದಲೇ ನಿನ್ನನ್ನು ನಾನು ಅಷ್ಟೊಂದು ಪ್ರೀತಿಸುತ್ತೇನೆ'' ಎಂದರು.

''ಈಗ ಠಾಕೂರರ ಕಾರ್ಯದಲ್ಲಿ ತೊಡಗಿರುವಾಗ, ಒಂದೊಂದು ಕಾಸಿನ ಲೆಕ್ಕವನ್ನೂ ಇಡಬೇಕು, ಇದು public money (ಸಾರ್ವಜನಿಕರ ಹಣ). ಸಾಧುಗಳ ಕೈಗೆ ಕೆಲಸಗಳು ಒದಗಿಬಂದಾಗ, ಅನಾಸಕ್ತ ಕರ್ಮ ಎಂದರೇನೆಂಬುದನ್ನು ಜನರಿಗೆ ಮಾಡಿ ತೋರಿಸಬೇಕು. ಒಂದು ಪೈಸೆ ಬೆಲೆ ಕಡಿಮೆ ಮಾಡಿಸಲು ಅದೆಷ್ಟು ಬಯ್ಯುತ್ತೇನೆ ನಾನು! ನೀವೋ, ಅವರು ಹೇಳಿದಷ್ಟು ಹಣವನ್ನು ಜೇಬಿನಿಂದ ತೆಗೆದು ಕೊಟ್ಟುಬಿಡುತ್ತೀರಿ! ನಾನೇಕೆ ಬಯ್ಯುತ್ತೇನೆ ಎಂದು ನಿಮಗೆ ತಿಳಿಯುವುದಾದರೂ ಹೇಗೆ? ಠಾಕೂರರು ಈ ಸಂಸಾರವನ್ನೆಲ್ಲ ಸೃಷ್ಟಿಸಿರುವಾಗ, ಅದನ್ನು ಹೇಗೆ ನಡೆಸಬೇಕೆಂಬುದನ್ನೂ ಸಂಸಾರಿಗಳು ಇಲ್ಲಿಗೆ ಬಂದು ಕಲಿತುಕೊಳ್ಳಬೇಕು.

''ನಾನು ತಿರುಗಾಡುತ್ತಿದ್ದಾಗ ಬೇಕೆಂದೇ ಅಪಾಯಕಾರಿಯಾದ, ಕಷ್ಟಕರವಾದ ರಸ್ತೆಗಳಲ್ಲಿ ಹೋಗುತ್ತಿದ್ದೆ. ಏಕೆ ಗೊತ್ತೆ? ಮನಸ್ಸಿನಲ್ಲಿ (ಠಾಕೂರರು ಸಹಾಯ ಮಾಡುತ್ತಾರೋ ಇಲ್ಲವೋ ಎಂದು) ಸಂದೇಹ ಉಂಟಾದಾಗಲೆಲ್ಲ ಅವರನ್ನು ಈ ರೀತಿ ಪರೀಕ್ಷಿಸುತ್ತಿದ್ದೆ. ಪ್ರತಿಸಲವೂ ಅವರು ನಗುನಗುತ್ತ ಜಯಶೀಲರಾದರು.

''ಪರ್ವತ ಪ್ರದೇಶದ ಒಂದು ಹಳ್ಳಿಯಲ್ಲಿ ಒಂದು ಸಲ ಗೃಹಸ್ಥರೊಬ್ಬರ ಮನೆಯ ಒಂದು ಕೋಣೆಯಲ್ಲಿ ಆಶ್ರಯ ಪಡೆದೆ. ದನಕರುಗಳೂ ಅದೇ ಕೋಣೆಯಲ್ಲಿದ್ದವು. ರಾತ್ರಿ ಹುಲಿಯೊಂದು ಗರ್ಜಿಸುತ್ತಿತ್ತು – ದನಕರುಗಳು ಭಯದಿಂದ ನಡುಗುತ್ತಿದ್ದವು. ನಾನು ಮೆಲ್ಲನೆ ಎದ್ದು ಮನಸ್ಸಿನಲ್ಲೇ ಅಂದುಕೊಂಡೆ, 'ನಾನು ಸಂನ್ಯಾಸಿ! ನನಗೆ ಪ್ರಾಣದ ಭಯವೆ?' ಹೊರಗೆ ಒಂದು ಮರದ ಕೆಳಗೆ ರಾತ್ರಿಯನ್ನು ಕಳೆದೆ.''

* * *

ಬಾಬಾ ಹೇಳತೊಡಗಿದರು: ''ಒಂದು ಕಾಲದಲ್ಲಿ ಭಕ್ತಿ ,ಭಾವ ಇವೆಲ್ಲ ನನಗೆ ಹಿಡಿಸುತ್ತಿರಲಿಲ್ಲ. ಕೇವಲ ಅದ್ವೈತ ತತ್ತ್ವಗಳನ್ನೇ ಚಿಂತಿಸುತ್ತಿದ್ದೆ. ಇದ್ದಕ್ಕಿದ್ದಂತೆ ದಕ್ಷಿಣೇಶ್ವರದ ಕೋಣೆಯಲ್ಲಿ ಠಾಕೂರರು ಯಶೋದೆ ಹಾಗು ಶ್ರೀಕೃಷ್ಣನತ್ತ ನೋಡುತ್ತಾ ಭಾವಾವಿಷ್ಟರಾಗಿ ದಿಟ್ಟಿಸಿ ನೋಡುತ್ತಿರುವುದನ್ನು ಕಂಡೆ. ಭಾವಾವೇಶದಿಂದ ನನ್ನನ್ನು ಕರೆದು ಹೇಳಿದರು, 'ನೋಡು, ನೋಡು; ಏನು ಅದ್ಭುತ ಭಾವನೆ!' ನಾನತ್ತ ನೋಡಿದೆ, ಶ್ರೀಕೃಷ್ಣ ಅಂಬೆಗಾಲಿಡುತ್ತಾ ಓಡಿಹೋಗುತ್ತಿದ್ದಾನೆ, ಯಶೋದೆ ತನ್ನ ಕೈಯಲ್ಲಿ ಬೆಣ್ಣೆಯನ್ನು ತೆಗೆದುಕೊಂಡು ಹಿಂಬಾಲಿಸುತ್ತಾ ಅವನನ್ನು ಕರೆಯುತ್ತಿದ್ದಾಳೆ. ಅದನ್ನು ನೋಡುತ್ತ ಠಾಕೂರರು ತಲ್ಲೀನರಾಗಿ ಅಸ್ಪಷ್ಟ ಸ್ವರದಿಂದ ಹೇಳುತ್ತಿದ್ದಾರೆ, 'ನೋಡು, ನೋಡು; ಏನು ಅದ್ಭುತ ಭಾವನೆ!'

''ಹರ-ಗೌರಿಯರ ಲೀಲಾಕ್ಷೇತ್ರವಾದ ಹಿಮಾಲಯವನ್ನು ನೋಡಿದ್ದೆ. ಶಿವ ಹಾಗೂ ಶಕ್ತಿ. ನೂರಾರು ಪರ್ವತ ಶಿಖರಗಳು, ನೂರಾರು ಅನಾದಿ ಲಿಂಗಗಳಂತೆ! ಧ್ಯಾನಮಗ್ನ ಶಿವಮೂರ್ತಿ! ಆದಿ ಲೀಲಾಸ್ಥಾನ! ಗೌರಿ ತಪಸ್ಸು ಮಾಡಿದ ಸ್ಥಳ ಇದಲ್ಲವೆ? ಇಲ್ಲಿಯೇ ಎಲ್ಲವೂ.''

* * *

ಬಾಬಾ ಹೇಳುತ್ತಿದ್ದಾರೆ: ''ನೇರ ಕುಳಿತುಕೊಳ್ಳಬೇಕು – '**ಸಮಂ ಕಾಯಶಿರೋಗ್ರೀವಂ**' ಗೋಡೆಗೆ ಒರಗಿ ಕುಳಿತುಕೊಳ್ಳಬಾರದು, ಬಾಗಿ ಕುಳಿತುಕೊಳ್ಳಬಾರದು. ಬ್ರಹ್ಮಚಾರಿಗಳೆಂದೂ ಸೊಟ್ಟಗೆ ಕುಳಿತುಕೊಳ್ಳಬಾರದು. ಮೇರುದಂಡ (ಬೆನ್ನೆಲುಬು) ನೆಟ್ಟಗಿರಬೇಕು. ನಾನು ಹೇಗೆ ಕುಳಿತುಕೊಳ್ಳುತ್ತೇನೆ, ನೋಡು. ಕಾಲು ಕುಣಿಸಬಾರದು. ಕೈಕಾಲು ಅಲುಗಾಡಿಸಬಾರದು. ಗುರುಜನರ ಮುಂದೆ ಸ್ಥಿರವಾಗಿರಬೇಕು, ವಿನೀತರಾಗಿರಬೇಕು.''

ಆಶ್ರಮದ ಬ್ರಹ್ಮಚಾರಿಯೊಬ್ಬನ ಬಗ್ಗೆ ಹೇಳುತ್ತ, ''ಅವನು ಪಗಡಿ ಸುತ್ತಿಕೊಂಡು ಎಲ್ಲರಿಗೂ ತಿಳಿಯುವಂತೆ ಬಂದು ಕುಳಿತುಕೊಳ್ಳುತ್ತಾನೆ. ಸಂಜೆ ಒಂದು ಕಡೆ ಕುಳಿತಿರಲಾರ. ಕೆಮ್ಮುತ್ತಾ ತಾನು ಬಂದಿರುವುದನ್ನು ತಿಳಿಸುತ್ತಾನೆ. 'ನಾವು ಬಂದಿದ್ದೇವೆ, ನಾವು ಇದ್ದೇವೆ. ಈ ವರ್ಷ ಬ್ರಹ್ಮಚರ್ಯ ದೀಕ್ಷೆಯನ್ನು ನೀಡಬೇಕು'

ಎಂದು. ಅಲ್ಲಪ್ಪ, ಬ್ರಹ್ಮಚರ್ಯವೆಂದರೆ ಇನ್ನೇನು? ಸ್ಥಿರವಾಗಿ ಎರಡು ಗಂಟೆ ಒಂದೇ ಕಡೆ ಕುಳಿತುಕೋ ನೋಡೋಣ, ಅದು ಸಾಧ್ಯವಾದರೆ ಬ್ರಹ್ಮಚರ್ಯ ತಾನಾಗಿಯೇ ಆಗುತ್ತದೆ. ಬ್ರಹ್ಮ ಚರ್ಯ ಪಾಲಿಸಬೇಕೆಂದಿರುವರು, ರಾತ್ರಿ ಕಡಿಮೆ ಆಹಾರ ಸೇವಿಸ ಬೇಕು, ಹಾಲನ್ನು ಸ್ಪರ್ಶಿಸಬಾರದು.

''ನಮ್ಮ ವಿಷಯವೇ ಬೇರೆ. ನಾವೇನು ಸಾಮಾನ್ಯರೆ? ಬರೀ ಚಹಾ ಕುಡಿದು, ಮರದ ಬೇರು ತಿಂದು ಎಷ್ಟೋ ದಿನ ಕಳೆದಿದ್ದೇವೆ! ಕೆಲವು ದಿನ ಕೇವಲ ಗೋಧಿ ಸಿಕ್ಕಿದೆ. ಇಲ್ಲಿಯೇ ೫ ತಿಂಗಳು ಬರೀ ಸೊಪ್ಪುಸದೆ ತಿಂದು ಬದುಕಿದ್ದೇನೆ. ದೇಹದ ನರಗಳು ಎದ್ದು ಬಂದಿದ್ದವು – ಮೈಬಣ್ಣ ನೀಲಿಯಾಗಿಬಿಟ್ಟಿತ್ತು. 'ಇನ್ನೂ ಕೆಲವು ದಿನ ಹೀಗೆ ಮಾಡಿದರೆ, eruption(ಗುಳ್ಳೆಗಳು) ಉಂಟಾಗುತ್ತವೆ, ಕೀವು ಹೊರಬರುತ್ತದೆ. ನಿಮಗಂತೂ ಕಷ್ಟವೇ; ಇತರರಿಗೂ ಕಷ್ಟವಾಗುತ್ತದೆ' ಎಂದು ಡಾಕ್ಟರ್ ಹೇಳಿದರು. ಕೊನೆಗೆ ಅನ್ನ ತಿಂದೆ '—' ಆನಂದದಿಂದ ಅನ್ನ ಮಾಡಿ ತಿನ್ನಿಸಿದ. ಆಗ ಕ್ಷಾಮ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು, ಭತ್ತ ಬೆಳೆಯುತ್ತಿತ್ತು. ಅದರ ನಂತರವೇ ಹೊಟ್ಟೆಯ ತೊಂದರೆ ಶುರುವಾಯಿತು. ಏನು ತಿಂದರೂ ಸರಿಯಾಗಿ ಜೀರ್ಣವಾಗುತ್ತಿಲ್ಲ.''

* * *

ಸಾಯಂಕಾಲ ಬಾಬಾ ವರಾಂಡದ ಕ್ಯಾಂಪ್‌ಕಾಟ್‌ನಲ್ಲಿ ಕುಳಿತು ಭಕ್ತನೊಬ್ಬನಿಗೆ ಹೇಳುತ್ತಿದ್ದಾರೆ: ''ಅಯ್ಯೋ! ಎಷ್ಟೊಂದು ದುಃಖ ನಿನಗೆ! (ದುಃಖ ಶಮನ ಮಾಡಲು) ಏನು ಮಾಡಲಿ, ಯಾರಿಗೆ ಹೇಳಲಿ? ಠಾಕೂರ್, ಠಾಕೂರ್ !

''ನೋಡು, ಎಂದೂ ಹತಾಶನಾಗಬೇಡ. ಎಷ್ಟೇ ದುಃಖ ಬಂದರೂ, ಸುಖಕ್ಕಾಗಿ ಎಂದೂ ಪ್ರಾರ್ಥಿಸಬೇಡ. ಠಾಕೂರರು ಹೊಡೆತದ ಮೇಲೆ ಹೊಡೆತ ಕೊಟ್ಟು ತನ್ನಲ್ಲಿಗೆ ಕರೆಸಿಕೊಳ್ಳುತ್ತಾರೆ. ಅತ್ಯಂತ ದುಃಖದ ಸಮಯದಲ್ಲಿ ತುಲಸೀದಾಸರ ಒಂದು ಹಾಡನ್ನು ಹಗಲೂರಾತ್ರಿ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಿದ್ದೆ: **'ಸುಖಮೇ ಬಾಜ್ ಪಡೂ ದುಃಖ್ ರಹೂ ಸಂಗ್'**– 'ಸುಖವು ಭಗವಂತನನ್ನು ಮರೆಸಿ ಬಿಡುತ್ತದೆ. ದುಃಖ ಮಾತ್ರವೇ ಆತನನ್ನು ನೆನಪಿಗೆ ತರುವುದು.' ''

ಇನ್ನೊಂದು ದಿನ ಇನ್ನೊಬ್ಬ ಎಳೆಯ ವಯಸ್ಸಿನ ಭಕ್ತನ ಮಾತಿಗೆ ಉತ್ತರವಾಗಿ ಹೇಳಿದರು, ''ಹೌದು, ಈ ವಯಸ್ಸಿನಲ್ಲಿ ಕಾಮ-ಕ್ರೋಧಗಳು ಇದ್ದೇ ಇರುತ್ತವೆ. ಅವುಗಳನ್ನು ದಾಟಿ ಹೋಗುವುದೂ ಸಾಧ್ಯವಿದೆ. ನೀನೆಲ್ಲೇ ಇರು, ಅಥವಾ ನಾನೆಲ್ಲೇ ಇದ್ದರೂ ನನಗೆ ತಿಳಿಸು. ಅರ್ಥವಾಯಿತೆ? ಎಲ್ಲವೂ ಹೊರಟುಹೋಗುತ್ತವೆ. ಹಾಗೇನಾದರೂ ಹೋಗದಿದ್ದರೆ, ಇವಕ್ಕೆಲ್ಲ ಅರ್ಥವೇನು?''

ಇನ್ನೊಂದು ಬಾರಿ ಬಾಬಾ ತಮ್ಮ ಪಾಡಿಗೆ ತಾವು ಹೇಳುತ್ತಿದ್ದಾರೆ (ಸಮೀಪ ಜನರಿದ್ದರು): ''ತೋರಿಕೆಯ ಭಕ್ತಿ ಹೆಚ್ಚುಕಾಲ ಉಳಿಯದು. ಜನ ನೋಡುತ್ತ ಇರುವವರೆಗೆ, ಜನರಿಗೆ ಹೆದರಿ ಸ್ವಲ್ಪ ಹೊತ್ತು ಇರುತ್ತದೆ, ಅನಂತರ ಹೊರಟುಹೋಗುತ್ತದೆ. ಮೊದ ಮೊದಲು ಎಷ್ಟೊಂದು ಆತ್ಮೀಯತೆ, 'ಬಾಬಾ, ಬಾಬಾ' ಎಂದೆಲ್ಲ; ಕೊನೆಗೆ ಮಾತೇ ಇಲ್ಲ, ಕರೆದರೂ ಉತ್ತರವಿಲ್ಲ. ಈ ರೀತಿಯ ಭಕ್ತಿ ಒಳ್ಳೆಯದಲ್ಲ. ಎಷ್ಟು ಸಾಧ್ಯವೋ ಅಷ್ಟೇ ಮಾಡಬೇಕು. ಹೆಚ್ಚು ತೋರಿಕೆಯಿಂದ ಏನೂ ಪ್ರಯೋಜನವಿಲ್ಲ, ಯಾರದು ಎಂತಹ ಭಕ್ತಿಯೆಂಬುದನ್ನು ನೋಡಿದರೇನೇ ತಿಳಿಯುತ್ತದೆ.''

ಭಕ್ತನೊಬ್ಬನು ಪತ್ರದ ಮೂಲಕ ಪ್ರಶ್ನಿಸಿದ್ದ, 'ಗುರುಮೂರ್ತಿಯನ್ನು ಮೊದಲು ಧ್ಯಾನಿಸಬೇಕೇ, ಅಥವಾ ಇಷ್ಟಮೂರ್ತಿಯನ್ನು ಮೊದಲು ಧ್ಯಾನಿಸಬೇಕೆ? ಹಾಗೂ ಎಲ್ಲಿ ಧ್ಯಾನಿಸಬೇಕು?' ಎಂದು. ಅದಕ್ಕೆ ಉತ್ತರವಾಗಿ ಬಾಬಾ ಹೇಳಿದರು: ''ಹೀಗೆ ಬರೆ – ಠಾಕೂರರೇ ಗುರು, ಅವರೇ ಇಷ್ಟ. ಹೀಗಿರುವಾಗ 'ಮೊದಲು, ಆಮೇಲೆ' ಎನ್ನುವುದೇನಿದೆ? ಹೃದಯದಲ್ಲಿ ಧ್ಯಾನಿಸುವುದು ಪ್ರಶಸ್ತ – ಇಲ್ಲೇ, ನನ್ನೆದುರೇ ಆತನನ್ನು ನೋಡುತ್ತಿದ್ದೇನೆ, ನನ್ನ ಹೃದಯ ಮಂದಿರದಲ್ಲಿ ಆತನಿದ್ದಾನೆ; ನಾನು ಬಂದು ನೋಡುತ್ತಿದ್ದೇನೆ ಎಂಬಂತೆ. ಇಷ್ಟವಾದರೆ ಮೊದಲು ದಕ್ಷಿಣೇಶ್ವರವನ್ನೂ ಮನಸ್ಸಿಗೆ ತಂದುಕೊಳ್ಳಬಹುದು. ಭಾವಿಸಿಕೊಳ್ಳಲು ಸುಲಭವಾಗುವುದಾದರೆ ಹೀಗೆ ಮಾಡಬಹುದು. ಅದಕ್ಕೆ ಇಂತಹದೇ ಎಂಬ ನಿಯಮವೇನೂ ಇಲ್ಲ. ಭಗವಂತನನ್ನು ಪ್ರೀತಿಸುವುದೇ ಮುಖ್ಯ.''

ಗುರುಪೂರ್ಣಿಮೆಯ ದಿನದಂದು ಭಕ್ತನೊಬ್ಬ ಪಾಯಸ ಮಾಡಿ ತಂದು ಠಾಕೂರರಿಗೆ ನಿವೇದಿಸಿದ್ದ. ಸಾಯಂಕಾಲ ಅವನು ಗುರುದೇವರ ಪಾದಗಳಿಗೆ ಪುಷ್ಪಾಂಜಲಿಯನ್ನರ್ಪಿಸಲು ಬಂದಿದ್ದ. ಬಾಬಾ ಈಗತಾನೆ ಸ್ನಾನ ಮುಗಿಸಿ, ಕೋಣೆಗೆ ಬಂದು ಕುಳಿತು ಇಷ್ಟಮೂರ್ತಿಯ ಸ್ಮರಣೆ ಮಾಡುತ್ತಿದ್ದಾರೆ. ಪೂಜಾರಿ ಅಲ್ಲಿಗೆ ಬಂದು, 'ಪಾಯಸ ನೈವೇದ್ಯ ಬಹಳ ಚೆನ್ನಾಗಿತ್ತೆ'ಂದು ತಿಳಿಸಿದರು. ಭಕ್ತನ ಪುಷ್ಪಾಂಜಲಿಯನ್ನು ಸ್ವೀಕರಿಸಿದ ಬಾಬಾ ನಗುತ್ತ ಶುದ್ಧವಾದ ಉಚ್ಚಾರಣೆಯೊಂದಿಗೆ ಹೇಳಿದರು, ''ನಿನಗೆ ಜ್ಞಾನೋದಯವಾಯಿತೆ?'' ನಂತರ ಇನ್ನೂ ಒಬ್ಬಿಬ್ಬರು ಪುಷ್ಪಾಂಜಲಿಯನ್ನು ಅರ್ಪಿಸಿದಾಗ, ''(ಆಶ್ರಮದ) ಇವರಿಗೆ ಇವೆಲ್ಲಾ ತಿಳಿಯದು!'' ಎಂದರು.

ಸಂಜೆ ವರಾಂಡದ ಕ್ಯಾಂಪ್‌ಕಾಟ್ ಮೇಲೆ ಮಹಾರಾಜ್ ಮಲಗಿದ್ದರು. ಬಹಳ ಹೊತ್ತು ಮಾತುಕತೆಯೇನೂ ನಡೆಯದಿದ್ದಾಗ ಭಕ್ತ ಗುರುಪೂರ್ಣಿಮೆಯ ವಿಷಯವಾಗಿಯೇ ಕೇಳಿದ. ಬಾಬಾ ಹೇಳಿದರು: ''ಏಕೆ? ಏನು ವಿಷಯ? ನನಗೆ ಗೊತ್ತಿಲ್ಲವಲ್ಲ! ನೋಡಬೇಕು, ಎಲ್ಲವೂ ಇದೆ. ಎಲ್ಲಿಂದ ಶುರುವಾಗುವುದು? ಎಷ್ಟು ದಿನಗಳಿಂದ? ಈಗ ಚಾತುರ್ಮಾಸ್ಯ ಶುರುವಾಗಿದೆ. ಎಲ್ಲರೂ ಗುರುವಿನ ಬಳಿ ಬರುತ್ತಾರೆ. ಪಶ್ಚಿಮ ಭಾರತದಲ್ಲಿ ಈಗ ಬಹಳ ಸಂಭ್ರಮ. ಈ ಕಡೆ ಅಷ್ಟೊಂದು ಆಚರಣೆಯಲ್ಲಿಲ್ಲ. ಹಿಮಾಲಯದ ತೀರ್ಥಕ್ಷೇತ್ರ